ಮಂಗಳವಾರ 28ನೇ **ಮಾರ್ಚ್** 1995 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ 9-40 ಗಂಟೆಗೆ ಸಮಾವೇಶಗೊಂಡಿತು. **ಅಧ್ಯಕ್ಷರು :** .ಶ್ರೀ ರಮೇಶ್ ಕುಮಾರ್‌ರವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆ

ವಿಷಯ : ಮಾಜಿ ಸದಸ್ಯ ಶ್ರೀ ಕೆ. ಆರ್. ರಾಜಗೋಪಾಲ್‌ರವರ ನಿಧನ.

ಅಧ್ಯಕ್ಷರು : ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಕೆ. ಆರ್. ರಾಜ್‌ಗೋಪಾಲ್ ರವರು ದಿನಾಂಕ 27-3-95 ರಂದು ನಿಧನರಾದರೆಂದು ಈ ಸದನಕ್ಕೆ ನಾನು ವಿಷಾದದಿಂದ ತಿಳಿಸುತ್ತಿದ್ದೇನೆ. ಶ್ರೀಯುತರು 1978 ರಿಂದ 82ರವರೆಗೆ 6ನೇ ವಿಧಾನಸಭೆಗೆ ಮಂಡ್ಯ ಜಿಲ್ಲೆಯ ಪಾಂಡವಪುರ ಕ್ಷೇತ್ರದಿಂದ ಚುನಾಯಿತರಾಗಿದ್ದರು. ಪಾಂಡವಪುರದ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿ, ಪಾಂಡವಪುರ ತಾಲ್ಲೂಕು ಬೋರ್ಡ್ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನ ಆಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಚುಕ್ಕೆ ಗುರುತಿನ ಹಾಗೂ ಚಿಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುವುದು

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೆ, ದಿನಾಂಕ 28ನೇ ಮಾರ್ಚ್ 1995ರಂದು ಪ್ರಶ್ನೋತ್ತರ ವೇಳೆ ಇಲ್ಲದ ಕಾರಣ ಪಟ್ಟಿಯಲ್ಲಿರುವ 15 ಪ್ರಶ್ನೆಗಳ ಪೈಕಿ 11 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 60 ಪ್ರಶ್ನೆಗಳ ಪೈಕಿ 42 ಪ್ರಶ್ನೆಗಳಿಗೆ ಬಂದಿರುವ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.